ಲೇಖಕರೊಂದಿಗೆ ಮಾಡುತ್ತಿರುವ ಸಹಯಾತ್ರೆ ಇದೇನೇ. ಇದು ಅವರ ಯಾತ್ರೆ ಎಷ್ಟೋ, ಅಷ್ಟೇ ನಮ್ಮ ಯಾತ್ರೆಯೂ ಆಗುತ್ತದೆ. ಅವರ ದ್ವಂದ್ವ ಮತ್ತು ಬಿಕ್ಕಟ್ಟುಗಳು ನಮ್ಮ ಬಿಕ್ಕಟ್ಟುಗಳಾಗುತ್ತವೆ.

ಜೀವನದಲ್ಲಿ ಬರುವ ಅವಕಾಶ, ಮತ್ತು ಯಶಸ್ಸು, ಪ್ರತಿಭೆಗೆ ಸಂದದ್ದೇ? ಅಥವಾ ಈ ಎಲ್ಲವೂ ನಮ್ಮ ಮಹತ್ವಾಂಕಾಂಕ್ಷೆ ಮತ್ತು ದುಡ್ಡು ಬೇಕೆಂದು ಕೈಗೊಳ್ಳುವ ಪರಿಶ್ರಮಕ್ಕೆ ಸೇರಿದ್ದೇ ಎನ್ನುವ ಪ್ರಶ್ನೆಗಳನ್ನು ನಾವು ಆಗಾಗ ಕೇಳಿಕೊಳ್ಳಬೇಕು. ಪ್ರತಿಭೆಯಿದ್ದರೂ ಅದನ್ನು ವ್ಯಕ್ತಪಡಿಸಿ ಸಾಧಿಸಲು ಅವಕಾಶಗಳಿರಬೇಕು. ಬಂದ ಅವಕಾಶಗಳನ್ನು ಉಪಯೋಗಿಸಿಕೊಳ್ಳುವುದು ಹೇಗೆ? ಇಲ್ಲಿ ಸಂಸಾರ ಮತ್ತು ವೃತ್ತಿ, ಬೆಳವಣಿಗೆ ಮತ್ತು ಅನುಭವ ವಿಸ್ತಾರ, ತಕ್ಷಣಕ್ಕೆ ಬರಬಹುದಾದ ಆರ್ಥಿಕ ಲಾಭ, ಮತ್ತು ಅದನ್ನಾರ್ಜಿಸಲು ತೆತ್ತಬೇಕಾದ ಬೆಲೆ – ಎಲ್ಲವೂ ನಮ್ಮೆದುರಿಗೆ ಬಂದು ನಿಲ್ಲುತ್ತವೆ. ಈ ರೀತಿಯ ಆಯ್ಕೆಗಳೇ ನಮ್ಮ ಜೀವನದ ದಿಕ್ಕನ್ನು ನಿರ್ದೇಶಿಸಬಹುದು.

ಉದಾಹರಣೆಗೆ, ಈ ದ್ವಂದ್ವವನ್ನು ಪರಿಗಣಿಸಿ. ತಮ್ಮ ವೃತ್ತಿ ಜೀವನದ ಶಿಖರದಲ್ಲಿ ಸುಬ್ಬಾರಾವು ಮಾಡಬೇಕಾದ ಆಯ್ಕೆ ಇದು – ರಿಜರ್ವ್ ಬ್ಯಾಂಕಿನ ಗವರ್ನರ್ ಪದಕ್ಕೆ ಅವರನ್ನು ಪರಿಗಣಿಸುವುದಕ್ಕೆ ಒಪ್ಪಿಗೆಯೇ ಎಂದು ವಿತ್ತ ಮಂತ್ರಿಗಳಾದ ಚಿದಂಬರಂ ಕೇಳುತ್ತಾರೆ. ಆದರೆ ಈಗ ಆ ಕೆಲಸವನ್ನು ಒಪ್ಪಿಕೊಳ್ಳದೇ ಕಾದರೆ ಆರು ತಿಂಗಳುಗಳಲ್ಲಿ ಅವರನ್ನು ಕ್ಯಾಬಿನೆಟ್ ಸಚಿವರ ಸ್ಥಾನಕ್ಕೆ ಪರಿಗಣಿಸುವ ಸಾಧ್ಯತೆಯಿದೆ. ತಕ್ಷಣಕ್ಕೆ ಬಂದ ಘನತೆಯನ್ನು ಒಪ್ಪುವುದೋ, ಅಥವಾ ಮುಂದೆ ಬರಬಹುದಾದ ಇನ್ನೂ ಉನ್ನತ ಘನತೆಗಾಗಿ ಕಾದು ಒಂದು ಚಾನ್ಸ್ ತೆಗೆದುಕೊಳ್ಳುವುದೋ… ಈ ರೀತಿಯಾದ ಆಯ್ಕೆಗಳು ಕಷ್ಟ. ಅದು ಸರಿಯಾದ ಆಯ್ಕೆಯೋ ಅಲ್ಲವೋ ಎನ್ನುವುದು ಕಾಲಾಂತರದಲ್ಲಿ ಗೊತ್ತಾಗುತ್ತದೆ. ಆದರೆ ಕಾಲಾಂತರದಲ್ಲಿ ಗೊತ್ತಾಗಿಯೂ ಪ್ರಯೋಜನವಿಲ್ಲ. ಜೀವನದ ಕಾಲಚಕ್ರವನ್ನು ಹಿಂದಕ್ಕೆ ಅಟ್ಟಲು ಸಾಧ್ಯವಿಲ್ಲ. ಆದರೂ ಆತನ, ಮತ್ತು ಇತರರ ದ್ವಂದ್ವಗಳಿಂದ ನಾವು ಕಲಿಯಬಹುದೇ? ಹಿಂದಿರುಗಿ ನೋಡಿದಾಗ – ಕ್ಯಾಬಿನೆಟ್ ಸಚಿವ ಹುದ್ದೆ ಹೆಚ್ಚಿನ ಘನತೆಯದ್ದಾಗಿರಬಹುದು. ಆದರೆ ರಿಜರ್ವ್ ಬ್ಯಾಂಕಿನ ಗವರ್ನರ್ ಹುದ್ದೆ ತನ್ನದೇ ಖ್ಯಾತಿ, ಮತ್ತು ಘನತೆಗಳನ್ನು ತಂದೊಡ್ಡಿತು. ವಿಶ್ವದ ಆರ್ಥಿಕ ಬಿಕ್ಕಟ್ಟಿನ ಕಷ್ಟದ ವರ್ಷಗಳಲ್ಲಿ ರಿಜರ್ವ್ ಬ್ಯಾಂಕಿನ ನಾಯಕತ್ವ ವಹಿಸಿದ್ದು ಅವರಿಗೆ ತೃಪ್ತಿಯನ್ನು ನೀಡಿರಬಹುದು.

ಅದೇ ಕಾಲಕ್ಕೆ ವೃತ್ತಿಯ ಆರಂಭದಲ್ಲಿ ಎರಡು ಬಾರಿ ಜಗತ್ತಿನ ಖ್ಯಾತ ವಿಶ್ವವಿದ್ಯಾಲಯಗಳಲ್ಲಿ ಡಾಕ್ಟರೇಟ್ ಪಡೆಯುವ ಅವಕಾಶ ಒದಗಿದರೂ ಸಂದರ್ಭಕ್ಕೆ ಬಲಿಯಾಗಿ ದೇಶಕ್ಕೆ ಹಿಂದಿರುಗಿ ಬರಬೇಕಾದ ಪರಿಸ್ಥಿತಿಯನ್ನೂ, ಆಗ ಮಾಡಿದ ಆಯ್ಕೆಗಳನ್ನೂ ನಾವು ನೋಡಬೇಕು. ಅಲ್ಲಿ ಖಾಸಗಿ ಬದುಕಿನ ಒತ್ತಡಗಳು ವೃತ್ತಿಪರ ಬದುಕಿನ ಮಹತ್ವಾಕಾಂಕ್ಷೆಗೆ ಅಡ್ಡಗಾಲು ಹಾಕಿದ್ದು ಕಾಣಿಸುತ್ತದೆ.

ಹಲವು ಜೀವನಗಾಥೆಗಳಿಂದ ಬೇರೊಬ್ಬರ ಜೀವನ ಮತ್ತು ಪ್ರಭಾವದ ಬಗ್ಗೆ ತಿಳಿಯಲು ಸಾಧ್ಯವೇ? ಇದು ಆಸಕ್ತಿಯ ಮಾತು. ಅವಿಭಜಿತ ಆಂಧ್ರಪ್ರದೇಶದ ಅಧಿಕಾರಶಾಹಿಗಳ ಸಂದರ್ಭದಲ್ಲಿ ನಮಗೆ ಭಿನ್ನ ಸಂದರ್ಭಗಳಲ್ಲಿ ನಾಲ್ಕು ಹೆಸರುಗಳು ಕೇಳಿಸುತ್ತವೆ – ಬಿ.ಎನ್. ಯುಗಂಧರ್, ಟಿ.ಎಲ್. ಶಂಕರ್, ಬಿ.ಪಿ.ಆರ್. ವಿಠ್ಠಲ್ ಮತ್ತು ಎಸ್.ಆರ್. ಶಂಕರನ್. ಈ ನಾಲ್ಕೂ ಜನ ಆ ರಾಜ್ಯದ ಅಧಿಕಾರಶಾಹಿಯನ್ನು ಅನೇಕ ರೀತಿಯಲ್ಲಿ ರೂಪಿಸಿದ್ದಾರೆ. ಅವರ ಜೀವನಗಾಥೆಗಳಿಲ್ಲದಿದ್ದರೂ, ಮಿಕ್ಕವರ ಜೀವನಗಾಥೆಗಳಿಂದ ಅವರುಗಳ ಪ್ರಭಾವ ಎಷ್ಟಿತ್ತು ಎನ್ನುವುದನ್ನು ನಾವು ಊಹಿಸಬಹುದು. ಆದರೆ ಸುಬ್ಬಾರಾವು ಮತ್ತು ವೈ.ವಿ. ರೆಡ್ಡಿ ಈ ಅಧಿಕಾರಶಾಹಿಯ ವಿಸ್ತೃತ ಕುಟುಂಬಕ್ಕೆ ಸೇರಿದವರಾದರೂ, ಅವರುಗಳ ಹೆಸರು ಕಾಯಂ ಆಗುವುದು ಆಂಧ್ರಪ್ರದೇಶ ಮತ್ತು ಸ್ಥಳೀಯ ಪ್ರಗತಿಯ ಸಂದರ್ಭದಲ್ಲಿ ಅಲ್ಲ, ಬದಲಿಗೆ ದೇಶದ ಅರ್ಥವ್ಯವಸ್ಥೆಯನ್ನು ರೂಪಿಸಿದ ಆರ್.ಬಿ.ಐ. ಗವರ್ನರುಗಳಾಗಿ. ಅಂದರೆ ಅವರುಗಳ ವೃತ್ತಿಯಲ್ಲಿ ವೈಯಕ್ತಿಕವಾಗಿ ಬೆಳೆಯುತ್ತಾ, ತಮ್ಮ ಶ್ರೇಷ್ಠತೆಯನ್ನು ಪಕ್ವಮಾಡಿಕೊಳ್ಳುತ್ತಾ ಸಾರ್ವಜನಿಕ ಜೀವನವನ್ನು ಕಳೆದದ್ದು ನಿಜವಾದರೂ, ಅವರುಗಳನ್ನು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಗುರುಗಳೆಂದು ಪರಿಗಣಿಸುವ ಶಿಷ್ಯವೃಂದವನ್ನು ಕಟ್ಟಲಿಲ್ಲ. ಹೀಗಾಗಿ ಈ ಇಬ್ಬರ ನಾಯಕತ್ವದ ಗುಣಲಕ್ಷಣಗಳೇ ಬೇರೆ.

ಓದುಗರಾಗಿ ನಾವು ಜೀವನಗಾಥೆ ಅಥವಾ ಸ್ಮೃತಿಗಳನ್ನು ಯಾಕೆ ಓದಬೇಕು? ಯಾರ ಆತ್ಮಕಥನವನ್ನು ಓದಬೇಕು? ಅದರಿಂದ ನಮ್ಮ